ಕರ್ನಾಟಕ ವಿಧಾನ ಸಭೆ

ಬುಧವಾರ 11ನೇ ಜುಲೈ 1990

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-20 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಕಾಯಿದೆ ನಿಯಂತ್ರಿಸುವ ನಿಯಮಗಳ ರಚನೆ

೫೧೮ (೧೩೫೫) ಶ್ರೀ ಕೆ. ವಿ. ರವೀಂದ್ರನಾಥ್ ಬಾಬು (ಕೊಟ್ಟೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಜಿಲ್ಲಾಪರಿಷತ್ ಮಂಡಲ ಪಂಚಾಯಿತಿ ಕಾಯಿದೆ ನಿಯಂತ್ರಿಸುವ ನಿಯಮಗಳನ್ನು ಸರ್ಕಾರವು ರಚಿಸಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ಕೆಲವೊಂದು ಸರ್ಕಾರದ ಆದೇಶಗಳನ್ನು ಜಿಲ್ಲಾಪರಿಷತ್‌ಗಳು ಪಾಲಿಸುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಇಂತಹ ಸಂದರ್ಭಗಳಲ್ಲಿ ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್, ಮತ್ತು ಪ್ರವಾಸೋದ್ಯಮ ಸಚಿವರು)—

ಅ) ಹೌದು.

ಆ) ಇಲ್ಲ.

ಇ) ಹೌದು, ಉಲ್ಲಂಘನೆಯಾದಲ್ಲಿ,

SRI K. V. RAVINDRANATH BABU.—I had asked, "whether it is not a fact that Government have framed rules to regulate Zilla Parishat and Mandal Panchayat Act, "the answer is" Yes, "For my question (b), "if so whether the Government is aware that some of that Government orders are not followed by the Zilla Parishad," the answer given is "No". For my third question (c) "Whether Government would take action in such cases", The answer is "Yes, in cases of violation." ನಮಗೆ ತಿಳಿದಹಾಗೆ, ಕೆಲವು ಕೆಲಸಗಳ ಬಗ್ಗೆ ಸರ್ಕಾರ ಸ್ಪೆಸಿಫಿಕ್ ಆಗಿ ಹಣ ಕೊಟ್ಟು ಮೆನ್‌ಷನ್ ಮಾಡಿದ್ದರೂ ಸಹ ಹಣವನ್ನು ಡೈವರ್ಟ್ ಮಾಡಿ, ಬೇರೆ ಕೆಲಸಕ್ಕೆ ಉಪಯೋಗ ಮಾಡಿರುವಂಥಾದ್ದು ಇದೆ. ಬಳ್ಳಾರಿ ಜಿಲ್ಲಾ ಪರಿಷತ್ತಿಗೆ ಟೀಚರ್ಸ್‌ಗಳನ್ನು ವರ್ಗ ಮಾಡಬಾರದೆಂದೂ ಸರ್ಕಾರ ಆದೇಶ ಕಳುಹಿಸಿದ್ದರೂ ಎರಡು ದಿವಸ ತಡೆದು, ಸಾರಾಸಗಟಾಗಿ ಟ್ರಾನ್ಸ್‌ಫರ್ ಮಾಡಿದ್ದಾರೆ. Is it not the violation ? If so, what action the Government is taking against them ?

ಶ್ರೀ ಎಂ. ವೈ ಘೋರ್ಪಡೆ.– ಸನ್ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಸದಸ್ಯರು ಸರ್ಕಾರ ಯಾವ ಯಾವ ರೂಲ್ಸ್ ಮಾಡಿದೆ ಎಂದು ಕೇಳಿದ್ದಾರೆ. ಅದು ದೊಡ್ಡ ಪಟ್ಟಿ ಇದೆ. ಆ ರೂಲ್ಸ್ ಉಲ್ಲಂಘನೆಯಾಗಿದ್ದರೆ. ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ. ಈಗ ಮಾನ್ಯ ಸದಸ್ಯರು ಉಪ ಪ್ರಶ್ನೆಯನ್ನು ಬಳ್ಳಾರಿ ಜಿಲ್ಲಾಪರಿಷತ್‌ಗೆ ಸಂಬಂಧಪಟ್ಟಂತೆ ಕೇಳಿದ್ದಾರೆ. ಟ್ರಾನ್ಸ್‌ಫರ್ ಬಗ್ಗೆ ಬಹಳ ಸ್ಪಷ್ಟವಾದಂಥ ಉದ್ದೇಶ ಸರ್ಕಾರಕ್ಕೆ ಇದೆ. ಎ ಮತ್ತು ಬಿ ವರ್ಗದ ಅಧಿಕಾರಿಗಳ ವರ್ಗಾವಣೆಯನ್ನು ಸರ್ಕಾರವೇ ಮಾಡುತ್ತದೆ. ಸಿ ಮತ್ತು ಡಿ ವರ್ಗದ ನೌಕರರನ್ನು ಜಿಲ್ಲಾಮಟ್ಟದಲ್ಲಿರತಕ್ಕ ಅಧಿಕಾರಿಗಳು ಸರ್ಕಾರ ಕೊಟ್ಟಿಂಥ ಗೈಡ್‌ಲೈನ್ ಪ್ರಕಾರ ಮಾಡುತ್ತಾರೆ. ಈ ಗೈಡ್‌ಲೈನ್ ಬಿಟ್ಟು ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ಟ್ರಾನ್ಸ್‌ಫರ್ ಆಗಿದ್ದರೆ. ಅವನ್ನು ಸರಿಪಡಿಸುವಂಥ ಅಧಿಕಾರ ಸರ್ಕಾರಕ್ಕೆ ಇದೆ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಟೀಚರ್ಸ್ ವರ್ಗಾವಣೆ ಯಾವ ವರ್ಗದಲ್ಲಿ ಬರುತ್ತದೆಂಬುದನ್ನು ಹೇಳುತ್ತೀರಾ ? ಸರ್ಕಾರದ ಆದೇಶ ಇದ್ದರೂ ವರ್ಗಾವಣೆ ಮಾಡಿರುವುದು ತಪ್ಪಲ್ಲವೇ ? ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಸರ್ಕಾರ ಗೈಡ್‌ಲೈನ್ ಕೊಟ್ಟಿದೆ. ಗೈಡ್‌ಲೈನ್ ಪ್ರಕಾರ ಮಾಡಿದ್ದಾರೋ ಇಲ್ಲವೋ ಎನ್ನುವುದನ್ನು ಸರ್ಕಾರ ನೋಡುತ್ತದೆ. ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡುವಂಥ ಪ್ರಶ್ನೆ ಬಳ್ಳಾರಿಯಲ್ಲಿ ಬಂದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಹಾಸನದಲ್ಲಿ ಈ ಪ್ರಶ್ನೆ ಬರಬಹುದೆನ್ನುವ ಅನುಮಾನ ನನಗೆ ಇದೆ. ಹಾಸನಕ್ಕೆ ಟ್ರಾನ್ಸ್‌ಫರ್ ಬಗ್ಗೆ ನಾವು ಕೊಟ್ಟಿರತಕ್ಕ ಆದೇಶವನ್ನು ಅನುಷ್ಠಾನ ಮಾಡುವ ಬಗ್ಗೆ ಅಲ್ಲಿನ ಅಧ್ಯಕ್ಷರು ಆತಂಕ ಮಾಡಿದರೆ. ಸರ್ಕಾರ ತನ್ನ ಅಧಿಕಾರ ಚಲಾಯಿಸುತ್ತದೆ,

ಶ್ರೀ ಬಿ. ಶಿವರಾಮು. —ಸ್ವಾಮಿ, ನಿನೇ ಪ್ರಶ್ನೆಗೆ ಇಲ್ಲ ಎಂದು ಹೇಳಿದ್ದೀರಿ. ಹಾಸನದಲ್ಲಿ ಇಂಜಿನಿಯರುಗಳನ್ನು ಪೋಸ್ಟ್ ಮಾಡಿ ಒಂದು ತಿಂಗಳು ಆಗಿದೆ, ಇಲ್ಲಿಯವರೆಗೂ ಅವರನ್ನು ತೆಗೆದುಕೊಂಡಿಲ್ಲ. ನಾನು ಇದರ ಬಗ್ಗೆ ಈ ಸದನದ ಮೂಲಕ ಮಂತ್ರಿಗಳ ಗಮನವನ್ನು ಕೂಡ ಸೆಳೆದಿದ್ದೆ. ಆಗ ಲೋಕೋಪಯೋಗಿ ಮಂತ್ರಿಯವರು ನನಗೆ ಕ್ಷಾಲಾವಕಾಶವೆ ಕೆಂದು ಕೇಳಿದ್ದರು. ಈ ಅಧಿಕಾರಿಗಳನ್ನು ಇಲ್ಲಿಯವರೆಗೂ ಜಿಲ್ಲಾಪರಿಷತ್ ಅಧ್ಯಕ್ಷನ ಒತ್ತಾಯದಿಂದ ತೆಗೆದುಕೊಂಡಿಲ್ಲ. ಶುಕ್ರವಾರದ ದಿವಸ ವಿದ್ಯಾಮಂತ್ರಿಗಳು ಉಪಾಧ್ಯಾಯರ ವರ್ಗಾವಣೆ ಬಗ್ಗೆ ಆದೇಶ ಕೊಟ್ಟಿದ್ದೇನೆಂದು ಹೇಳಿದ್ದರು, ಅದನ್ನು ಕೂಡ ಅವರು ಪಾಲನೆ ಮಾಡಿಲ್ಲ. ಟೀಚರ್ಸ್‌ಗಳನ್ನೆ ಡ್ಯಾಟಿಗೆ ತೆಗೆದುಕೊಂಡಿಲ್ಲ ಕೆಲವು ಕಡೆ ಶಾಲೆಗಳನ್ನು ತೆರೆದಿಲ್ಲ. ನಮ್ಮಲ್ಲಿ ಇಂಜಿನಿಯರುಗಳು ಇಲ್ಲವೆ ಬಹಳ ತೊಂದರೆಯಾಗಿದೆ. ನನ್ನ ಕ್ಷೇತ್ರದಲ್ಲಿ ಬರಗಾಲ ಇದೆ. ಕುಡಿಯುವ ನೀರಿನ ತೊಂದರೆ ಇದೆ, ಕಳೆದ ಎರಡು ತಿಂಗಳಿಂದ ಇಂಜಿನಿಯರುಗಳು ತಮ್ಮ ಕ್ಷೇತ್ರಗಳಿಗೆ ಹೋಗಿ ಕೆಲಸ ಮಾಡುತ್ತಿಲ್ಲ. ಸಂಬಂಧಪಟ್ಟ ಅಧ್ಯಕ್ಷರಿಗೆ ತಾವು ಸೂಕ್ತ ಆದೇಶ ನೀಡಿ ಕ್ರಮ ತೆಗದುಕೊಳ್ಳುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಸ್ವಾಮಿ, ಜಿಲ್ಲಾಪರಿಷತ್ ಚೀಫ್ ಸೆಕ್ರಟರಿಯವರು, ಜಿಲ್ಲಾ ಮಟ್ಟದಲ್ಲಿರತಕ್ಕ ಮುಖ್ಯ ಅಧಿಕಾರಿಗಳು ಇವರಿಬ್ಬರೂ ಸೇರಿ ಸರ್ಕಾರದ ಗೈಡ್‌ಲೈನ್ ಪ್ರಕಾರ ಟ್ರಾನ್ಸ್‌ಫರ್ ಮಾಡಬೇಕು. ಅದರಲ್ಲಿ ದೋಷ ಇದ್ದರೆ ಅದನ್ನು ಸರ್ಕಾರಕ್ಕೆ ತಿಳಿಸಿದರೆ, ನಾವು ಸರಿಪಡಿಸಲಿಕ್ಕೆ ಸಾಧ್ಯವಾಗುತ್ತದೆ. ಇಷ್ಟು ಮಾತ್ರ ನಾನು ಹೇಳಬಲ್ಲೆ.

ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕು ಪೈಕಿ "ಇಂಚಲ" ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ

೫೧೯ (೧೪೨೭) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಪೈಕಿ 'ಇಂಚಲ' ಗ್ರಾಮದಲ್ಲಿ ಕುಡಿಯುವ ನೀರಿಗೆ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿ ಯಾವಾಗ ಕೊಡಲಾಯಿತು ?